2017 ಕ.ತೀ.ವ 358

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್
ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್

## ಕರ್ನಾಟಕ ರಾಜ್ಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ನೌಕರರ ಸಂಘ (ನೋಂ) ಮತ್ತು ಇತರರು -ವಿರುದ್ಧ- ಡಾ. ಶ್ರೀ ಕೆ. ರಾಧಾಕೃಷ್ಣರೆಡ್ಡಿ ಮತ್ತು ಇತರರು*

1971ರ ನ್ಯಾಯಾಲಯಗಳ ನಿಂದನಾ ಕಾಯಿದೆ ಕಲಂ 11 ಹಾಗೂ 12ರಡಿಯಲ್ಲಿ ಅರ್ಜಿ.

ರಿಟ್ ಅರ್ಜಿ ಸಂಖ್ಯೆ 9654 ರಿಂದ 9666/2013ರ ಅರ್ಜಿಗಳ ಮೇಲೆ ದಿನಾಂಕ 25.9.2013ರಂದು ಉಚ್ಚ ನ್ಯಾಯಾಲಯವು ನೀಡಿದ ಆದೇಶವನ್ನು ಎದುರುದಾರರು ಪಾಲಿಸಲ್ಲದ ಪರಿಣಾಮ ಅವರನ್ನು ಶಿಕ್ಷಿಸುವಂತೆ ಕೋರಿ ಸದರಿ ಅರ್ಜಿ ಸಲ್ಲಿಕೆ.

ನ್ಯಾಯಾಂಗ ನಿಂದನಾ ಅರ್ಜಿಯು ಬಾಕಿಯಿರುವ ಸಂದರ್ಭದಲ್ಲಿ ಏಕ ಸದಸ್ಯ ಪೀಠವು ತನ್ನ ಮಧ್ಯಂತರ ಆದೇಶವನ್ನು ಮಾರ್ಪಾಡು ಮಾಡಿರುತ್ತದೆ. ಈ ಸಂದರ್ಭದಲ್ಲಿ ಆರೋಪಿತರ ವಿರುದ್ಧ ಈ ಫಿರ್ಯಾದಿನೊಂದಿಗೆ ನಡವಳಿಗಳನ್ನು ಮುಂದುವರಿಸುವ ಪ್ರಶ್ನೆಯೇ ಇರುವುದಿಲ್ಲ. ನ್ಯಾಯಾಂಗ ನಿಂದನಾ ಮೊಕದ್ದಮೆಗಳು ಸಂಕ್ಷಿಪ್ತ ಪ್ರಕ್ರಿಯೆಯಾಗಿದ್ದು ದೋಷಾರೋಪ ಪಟ್ಟಿಯನ್ನು ಮಾಡಿದ ನಂತರವೂ ನಡವಳಿಗಳನ್ನು ತಡೆಹಿಡಿಯಲು ಯಾವುದೇ ಅಡೆತಡೆಗಳಲ್ಲವೆಂದು ಅಭಿಪ್ರಾಯ ಪಟ್ಟ ಉಚ್ಚ ನ್ಯಾಯಾಲಯದ ದ್ವಿ-ಸದಸ್ಯ ಪೀಠವು ಸದರಿ ಅರ್ಜಿಗಳನ್ನು ವಜಾಗೊಳಿಸಿದೆ.

*ಸಿಸಿಸಿ (ಸಿವಿಲ್) ಸಂಖ್ಯೆ: 172-184/2014, ದಿನಾಂಕ: 2ನೇ ಡಿಸೆಂಬರ್, 2016.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. (1997) 3 ಎಸ್‌ಸಿಸಿ 443 ತಾಯಬ್ಬಾಯ್ ಎಂ. ಬಗಸರ್‌ವಾಲ ಮತ್ತು ಇನ್ನೊಬ್ಬರು –ವಿರುದ್ಧ– ಹಿಂದ್ ರಬ್ಬರ್ ಇಂಡಸ್ಟ್ರೀಸ್ ಪ್ರೈ.ಲಿ. ಮತ್ತು ಇತರರು* | *(ಉಲ್ಲೇ) 8* |
| *2. (2004) 7 ಎಸ್‌ಸಿಸಿ 261; ಪ್ರಥಾವಿನಾಥ್ ರಾಮ್ –ವಿರುದ್ಧ– ಜಾರ್ಖಂಡ್ ರಾಜ್ಯ ಸರ್ಕಾರ ಮತ್ತು ಇತರರು* | *(ಉಲ್ಲೇ) 8* |
| *3. (2008) 14 ಎಸ್‌ಸಿಸಿ 561; ಪಟೇಲ್ ರಜನಿಕಾಂತ್ ಧುಲಾಬಾಯಿ ಮತ್ತು ಇನ್ನೊಬ್ಬರು –ವಿರುದ್ಧ– ಪಟೇಲ್ ಚಂದ್ರಕಾಂತ್ ಧುಲಾಬಾಯಿ ಮತ್ತು ಇತರರು* | *(ಉಲ್ಲೇ) 8* |
| *4. ಎಐಆರ್ 2004 ಎಸ್‌ಸಿ 4419 ಬಿಹಾರ ರಾಜ್ಯ ಸರ್ಕಾರ ಮತ್ತು ಇತರರು –ವಿರುದ್ಧ– ರಾಜೇಂದ್ರ ಸಿಂಗ್ ಮತ್ತು ಇನ್ನೊಬ್ಬರು* | *(ಉಲ್ಲೇ) 8* |
| *5. (2005) 6 ಎಸ್‌ಸಿಸಿ 98. ಉತ್ತರಾಂಚಲ ಶಿಕ್ಷಣ ಇಲಾಖೆ ನಿರ್ದೇಶಕರು ಮತ್ತು ಇತರರು –ವಿರುದ್ಧ– ವೇದ್ ಪ್ರಕಾಶ್ ಜೋಶಿ ಮತ್ತು ಇತರರು* | *(ಉಲ್ಲೇ) 8* |
| *6. (1992)4 ಎಸ್‌ಸಿಸಿ 167 ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರ –ವಿರುದ್ಧ– ಮೊಹಮ್ಮದ್ ಯಾಕೂಬ್ ಖಾನ್ ಮತ್ತು ಇತರರು* | *(ಉಲ್ಲೇ) 9* |
| *7. ಸಿಸಿಸಿ (ಸಿವಿಲ್) ಸಂಖ್ಯೆ: 81/1993, ದಿ: 1–6–1993 ಪಿ.ಇ. ನಾರಾಯಣ ಸ್ವಾಮಿ –ವಿರುದ್ಧ– ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ* | *(ಉಲ್ಲೇ) 9* |
| *8. ಎಐಆರ್ 1971 ಮೈಸೂರು 60 ಮೈಸೂರು ರಾಜ್ಯ ಸರ್ಕಾರ –ವಿರುದ್ಧ– ಖಲೀಲುಲ್ಲಾ ಅಹಮದ್ ಶರೀಫ್ ಮತ್ತು ಇನ್ನೊಬ್ಬರು* | *(ಉಲ್ಲೇ) 10* |

ದೂರುದಾರರ ಪರ: ಶ್ರೀ ಕೆ.ಎನ್. ಸತೀಶ್, ನ್ಯಾಯವಾದಿ ಪರವಾಗಿ ಶ್ರೀ ಸುಬ್ಬ ರಾವ್, ಹಿರಿಯ ನ್ಯಾಯವಾದಿ.
ಆಪಾದಿತರ ಪರ: ಶ್ರೀಮತಿ ಎಸ್. ಸುಶೀಲ, ಎಜಿಎ ಪರವಾಗಿ ಶ್ರೀ ಮಧುಸೂಧನ್ ಆರ್. ನಾಯಕ್, ಅಡ್ವೊಕೇಟ್ ಜನರಲ್ ಮತ್ತು ಶ್ರೀ ಅಜಯ್ ಕುಮಾರ್ ಪಾಟೀಲ್, ನ್ಯಾಯವಾದಿ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್:**

ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971ರ 11 ಮತ್ತು 12ನೇ ಪ್ರಕರಣಗಳ ಅಡಿಯಲ್ಲಿ ಸಲ್ಲಿಸಲಾದ ಈ ಮೊಕದ್ದಮೆಗಳಲ್ಲಿ ದೂರುದಾರರು ರಿಟ್ ಅರ್ಜಿ ಸಂ.9654 ರಿಂದ 9666/2013 ದಿನಾಂಕ 25.9.2013 ರಿಟ್ ಅರ್ಜಿಯ ಆದೇಶವನ್ನು ಪಾಲಿಸದಿರುವ ಆಧಾರದ ಮೇಲೆ ಆಪಾದಿತರಿಗೆ ದಂಡನೆ ವಿಧಿಸುವಂತೆ ಕೋರಿದ್ದಾರೆ.

2. ದೂರುದಾರರು ದಿನಾಂಕ 20.7.2012ರ ಸುತ್ತೋಲೆಯನ್ನು ರದ್ದುಪಡಿಸಲು ನಿರ್ದೇಶಿಸುವಂತೆ ಕೋರಿ ಮತ್ತು ಇತರ ಕೆಲವು ಪರಿಹಾರಗಳಿಗಾಗಿ ಮೇಲ್ಕಂಡ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ. 1.3.2013ರಂದು, ಈ ನ್ಯಾಯಾಲಯವು ಎದುರುದಾರರಿಗೆ ತುರ್ತು ನೋಟೀಸು ಹೊರಡಿಸುವಾಗ, ಅರ್ಜಿದಾರರು/ ದೂರುದಾರರನ್ನು ಇನ್ನೂ ವಜಾಗೊಳಿಸಿರದಿದ್ದರೆ ಅವರ ಸೇವೆಗಳನ್ನು ಅಂತ್ಯಗೊಳಿಸದಂತೆ ಎದುರುದಾರರಿಗೆ ನಿರ್ದೇಶನ ನೀಡಿತ್ತು. ದಿನಾಂಕ 25.9.2013ರಂದು, ಅಲ್ಲಿನ 2ನೇ ಎದುರುದಾರ – ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಗಮನ ಹರಿಸುವಂತೆ ಸರ್ಕಾರೀ ವಕೀಲರಿಗೆ ನಿರ್ದೇಶಿಸಲಾಗಿತ್ತು ಮತ್ತು ದಿನಾಂಕ 1.3.2013ರ ಮಧ್ಯಂತರ ಆದೇಶದ ಮುಂದುವರಿಕೆಯಾಗಿ ಅರ್ಜಿದಾರರ/ ದೂರುದಾರರ ವೇತನಗಳನ್ನು ಸಂದಾಯ ಮಾಡುವಂತೆ ಎದುರುದಾರರಿಗೆ ನಿರ್ದೇಶನ ನೀಡಲಾಗಿತ್ತು. ಸದರಿ ಆದೇಶವು ಈ ಕೆಳಕಂಡಂತಿದೆ:

"3 ರಿಂದ 16ರ ವರೆಗಿನ ಎದುರುದಾರರ ಪರ ನ್ಯಾಯವಾದಿಯು ಗೈರುಹಾಜರಾಗಿದ್ದರು.

ಸರ್ಕಾರಿ ವಕೀಲರು 2ನೇ ಎದುರುದಾರರ ವಿಷಯದ ಬಗ್ಗೆ ಗಮನ ವಹಿಸಿದರು.

ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಸುಬ್ಬರಾವ್ ಅವರ ವಾದವನ್ನು ಆಲಿಸಲಾಗಿದೆ.

ಅರ್ಜಿದಾರರ ಸೇವೆಗಳನ್ನು ಅಂತ್ಯಗೊಳಿಸದಂತೆ ಎದುರುದಾರರಿಗೆ ನಿರ್ದೇಶಿಸಿ ಈ ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿದ್ದರೂ ಕೂಡ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳು ಅವರ ವೇತನಗಳನ್ನು ಸಂದಾಯ ಮಾಡುತ್ತಿಲ್ಲವೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ.

ಅರ್ಜಿದಾರರ ಸೇವೆಗಳನ್ನು ಅಂತ್ಯಗೊಳಿಸಬಾರದೆಂದು ಮಧ್ಯಂತರ ಆದೇಶವನ್ನು ಹೊರಡಿಸಿರುವಾಗ ಸಂಬಂಧಪಟ್ಟ ಎದುರುದಾರರು ಅವರ ವೇತನಗಳ ಸಂದಾಯವನ್ನು ಮುಂದುವರಿಸುವುದು ಅಗತ್ಯವೆಂಬುದು ಸ್ಪಷ್ಟವಾಗುತ್ತದೆ. ಅವರು ಹಾಗೆ ಮಾಡಲು ತಪ್ಪಿದ್ದರೆ, ದಿನಾಂಕ 1.3.2013ರಂದು ನೀಡಿದ ಮಧ್ಯಂತರ ಆದೇಶದಂತೆ ಮುಂದುವರಿದು ಮುಂದಿನ ಆದೇಶಗಳವರೆಗೆ ಅರ್ಜಿದಾರರ ವೇತನಗಳನ್ನು ಸಂದಾಯ ಮಾಡುವಂತೆ ಅವರಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

ಷರತ್ತು ಪೂರ್ವಕ ಆದೇಶವನ್ನು ಹೊರಡಿಸಲಾಗಿದೆ".

3. ಸದರಿ ಆದೇಶವನ್ನು ಪಾಲಿಸದಿರುವ ಕಾರಣದಿಂದ, ದೂರುದಾರರು ದಿನಾಂಕ 12.1.2014ರಂದು ಮೇಲ್ಕಂಡ ಮೊಕದ್ದಮೆಗಳನ್ನು ದಾಖಲಿಸಿದ್ದಾರೆ.

4. ದಿನಾಂಕ 13.6.2014ರಂದು ಆಪಾದಿತರ ವಿರುದ್ಧ ದೋಷಾರೋಪಗಳನ್ನು ರೂಪಿಸಲಾಗಿದೆ.

5. ಆದರೆ, 17.12.2015ರಂದು ಮಾನ್ಯ ಏಕ ಸದಸ್ಯ ಪೀಠವು ರಿಟ್ ಅರ್ಜಿಗಳಲ್ಲಿನ ಮೇಲೆ ತಿಳಿಸಿದ ಮಧ್ಯಂತರ ಆದೇಶಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿದ್ದಾರೆ.

> "6. ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿದ ಮೇಲೆ, ಮುಂಚಿನ ದಿನಾಂಕ 1.3.2013 ಮತ್ತು ದಿನಾಂಕ 25.9.2013ರ ಮಧ್ಯಂತರ ಆದೇಶಗಳಲ್ಲಿ ಈ ಮೊಕದ್ದಮೆಗಳ ಅಂತಿಮ ವಿಲೆಯವರೆಗೆ ಈ ಕೆಳಕಂಡ ಮಧ್ಯಂತರ ಏರ್ಪಾಟುಗಳನ್ನು ಮಾಡುವ ಮೂಲಕ ಅವುಗಳನ್ನು ಮಾರ್ಪಾಟುಗೊಳಿಸುವುದು ಅತ್ಯಗತ್ಯ ಹಾಗೂ ನ್ಯಾಯ ಸಮ್ಮತವೆಂಬುದು ನನ್ನ ಭಾವನೆಯಾಗಿದೆ:
>
> (i) 2 ರಿಂದ 10 ರವರೆಗಿನ ಅರ್ಜಿದಾರರು ತಮ್ಮ ಸಂಬಂಧಪಟ್ಟ ಕಾರ್ಯ ಸ್ಥಾನದಲ್ಲಿಯೇ ವರದಿ ಮಾಡಿಕೊಂಡು, ತಮಗೆ ಹಂಚಿಕೆ ಮಾಡಿದ ಕರ್ತವ್ಯಗಳನ್ನು ನಿರ್ವಹಿಸುವಂತೆ ನಿರ್ದೇಶಿಸಲಾಗಿದೆ. ಅವರು ರಾಜ್ಯ ಸರ್ಕಾರವು ನಿಯೋಜಿಸಿದ ಏಜೆನ್ಸಿಯು ಮಾರ್ಗಸೂಚಿಗಳು, ಮೇಲ್ವಿಚಾರಣೆ ಮತ್ತು ನಿರ್ದೇಶನಗಳ ಅಡಿಯಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.
>
> (ii) 2 ರಿಂದ 10ರ ವರೆಗಿನ ಅರ್ಜಿದಾರರಿಗೆ ಹಂಚಿಕೆ ಮಾಡಿದ ಕರ್ತವ್ಯಗಳನ್ನು ನಿರ್ವಹಿಸಲು ಅವರಿಗೆ ಅನುಮತಿ ನೀಡುವಂತೆ

ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

(iii) 2 ರಿಂದ 10ರ ವರೆಗಿನ ಅರ್ಜಿದಾರರು ಕಾರ್ಯ ನಿರ್ವಹಿಸಿದ ಅವಧಿಗೆ ಸಂಬಂಧಪಟ್ಟ ಕಾರ್ಯ ನಿರ್ವಾಹಕರು ಅವರಿಗೆ ವೇತನ ನೀಡತಕ್ಕದ್ದು.

(iv) ಹೊಸದಾಗಿ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ಕೈಗೊಂಡ ನಿಯತ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು 2 ರಿಂದ 10ರ ವರೆಗಿನ ಅರ್ಜಿದಾರರಿಗೂ ಕೂಡ ಸ್ವಾತಂತ್ರ್ಯವನ್ನು ಕಾಯ್ದಿರಿಸಲಾಗಿದೆ.

(v) ಈ ಏರ್ಪಾಟು ಈ ಅರ್ಜಿಗಳಲ್ಲಿ ಪಕ್ಷಕಾರರು ಎತ್ತಿರುವ ವಾದ–ಪ್ರತಿವಾದಗಳಿಗೆ ಬಾಧಕವಾಗದಂತಿರತಕ್ಕದ್ದು ಮತ್ತು ರಿಟ್ ಅರ್ಜಿಗಳ ಅಂತಿಮ ಫಲಿತಾಂಶಕ್ಕೆ ಒಳಪಟ್ಟಿರತಕ್ಕದ್ದು."

6. ದೂರುದಾರರು ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರನ್ನು ಪಕ್ಷಕಾರರನ್ನಾಗಿ ಸೇರ್ಪಡೆಗೊಳಿಸಲು ಐ.ಎ.ಸಂಖ್ಯೆ 5/2014 ಮಧ್ಯಂತರ ಅರ್ಜಿಯೊಂದನ್ನು ಸಲ್ಲಿಸಿದ್ದರು. ಸದರಿ ಅರ್ಜಿಯನ್ನು ಪ್ರಸ್ತಾಪಿತ ಆಪಾದಿತರು ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸುವ ಮೂಲಕ ವಿರೋಧಿಸಿದ್ದರು.

7. ಐ.ಎ.ಸಂಖ್ಯೆ 5/2014 ಅರ್ಜಿಯಲ್ಲಿನ ಪ್ರಸ್ತಾಪಿತ ಆಪಾದಿತರ ಪರ ಹಾಜರಾದ ಮಾನ್ಯ ಅಡ್ವೊಕೇಟ್ ಜನರಲ್ ಅವರು, ಮಾನ್ಯ ಏಕ ಸದಸ್ಯ ಪೀಠವು 17.12.2015ರಂದು ದಿನಾಂಕ 1.3.2013 ಮತ್ತು ದಿನಾಂಕ 25.9.2013ರ

ಆದೇಶಗಳನ್ನು ಮಾರ್ಪಾಟುಗೊಳಿಸಿರುವುದರಿಂದ ದೂರುಗಳು ಈಗಿರುವ ಸ್ಥಿತಿಯಲ್ಲಿ ಸಮರ್ಥಿತವಾಗುವುದಿಲ್ಲವೆಂದು ವಾದಿಸಿದರು.

8. ಆದರೆ, ದೂರುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಸುಬ್ಬರಾವ್ ಅವರು, ದಿನಾಂಕ 25.9.2013ರ ಆದೇಶವು ದಿನಾಂಕ 17.12.2015ರಂದು ಮಾರ್ಪಾಟಾಗುವವರೆಗೆ ಜಾರಿಯಲ್ಲಿದ್ದು, ಸದರಿ ಆದೇಶವನ್ನು ಆಪಾದಿತರು ಪಾಲಿಸಿಲ್ಲ, ಹಾಗಾಗಿ ಸದರಿ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವ ಸಂಬಂಧವಾಗಿ ಆಪಾದಿತರು ದಂಡನೆಗೆ ಅರ್ಹರೆಂದು ವಾದಿಸಿದ್ದಾರೆ. ಈ ಸಂಬಂಧದಲ್ಲಿ ಅವರು ಈ ಕೆಳಕಂಡ ತೀರ್ಪುಗಳನ್ನು ಅವಲಂಬಿಸಿದ್ದಾರೆ.

(i) ***ತಾಯಬ್ಬಾಯ್ ಎಂ. ಬಗಸರ್‌ವಾಲ ಮತ್ತು ಇನ್ನೊಬ್ಬರು –ವಿರುದ್ಧ– ಹಿಂದ್ ರಬ್ಬರ್ ಇಂಡಸ್ಟ್ರೀಸ್ ಪ್ರೈ.ಲಿ. ಮತ್ತು ಇತರರು***[1];

(ii) ***ಪ್ರಿಥಾವಿನಾಥ್ ರಾಮ್ –ವಿರುದ್ಧ– ಜಾರ್ಖಂಡ್ ರಾಜ್ಯ ಸರ್ಕಾರ ಮತ್ತು ಇತರರು***[2];

(iii) ***ಪಟೇಲ್ ರಜನಿಕಾಂತ್ ಧುಲಾಬಾಯಿ ಮತ್ತು ಇನ್ನೊಬ್ಬರು –ವಿರುದ್ಧ – ಪಟೇಲ್ ಚಂದ್ರಕಾಂತ್ ಧುಲಾಬಾಯಿ ಮತ್ತು ಇತರರು***[3];

(iv) ***ಬಿಹಾರ ರಾಜ್ಯ ಸರ್ಕಾರ ಮತ್ತು ಇತರರು –ವಿರುದ್ಧ– ರಾಜೇಂದ್ರ ಸಿಂಗ್ ಮತ್ತು ಇನ್ನೊಬ್ಬರು***[4]; ಮತ್ತು

(v) ***ಉತ್ತರಾಂಚಲ ಶಿಕ್ಷಣ ಇಲಾಖೆ ನಿರ್ದೇಶಕರು ಮತ್ತು ಇತರರು –ವಿರುದ್ಧ– ವೇದ್ ಪ್ರಕಾಶ್ ಜೋಶಿ ಮತ್ತು ಇತರರು***[5].

1. (1997) 3 ಎಸ್‌ಸಿಸಿ 443
2. (2004) 7 ಎಸ್‌ಸಿಸಿ 261
3. (2008) 14 ಎಸ್‌ಸಿಸಿ 561
4. ಎಐಆರ್ 2004 ಎಸ್‌ಸಿ 4419
5. (2005) 6 ಎಸ್‌ಸಿಸಿ 98

9. ಅದಕ್ಕೆ ಪ್ರತಿಯಾಗಿ, ಮಾನ್ಯ ಅಡ್ವೊಕೇಟ್ ಜನರಲ್ ಅವರು, ದಿನಾಂಕ 1.3.2013ರ ಆದೇಶವು ಏಕ ಪಕ್ಷೀಯ ಮಧ್ಯಂತರ ಆದೇಶವಾಗಿದೆ, 25.9.2013ರಂದು ಆದೇಶಗಳನ್ನು ಮಾಡಬೇಕಾಗಿ ಬಂದಾಗ ನ್ಯಾಯಾಲಯವು ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಗಮನ ಹರಿಸುವಂತೆ ಸರ್ಕಾರೀ ನ್ಯಾಯವಾದಿಗಳಿಗೆ ನಿರ್ದೇಶಿಸಿತು ಮತ್ತು ದಿನಾಂಕ 1.3.2013ರ ಮಧ್ಯಂತರ ಆದೇಶದ ಮುಂದುವರಿಕೆಯಾಗಿ ದೂರುದಾರರಿಗೆ ವೇತನಗಳನ್ನು ಸಂದಾಯ ಮಾಡುವಂತೆ ಅಲ್ಲಿನ ಎದುರುದಾರರಿಗೆ ನಿರ್ದೇಶಿಸಿತು. ದಿನಾಂಕ 17.12.2015ರಂದು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲುಗಳನ್ನು ಆಲಿಸಿದ ತರುವಾಯ ನ್ಯಾಯಾಲಯವು ಮುಂಚಿನ ಆದೇಶವನ್ನು ಮಾರ್ಪಾಟುಗೊಳಿಸಿತು, ಪಕ್ಷಕಾರರು ದಿನಾಂಕ 17.12.2015ರ ಆದೇಶಕ್ಕೆ ಬದ್ಧರಾಗಿರುತ್ತಾರೆಂದು ವಾದಿಸಿದರು. ***ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರ –ವಿರುದ್ಧ– ಮೊಹಮ್ಮದ್ ಯಾಕೂಬ್ ಖಾನ್ ಮತ್ತು ಇತರರು*** [6], ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮತ್ತು ***ಪಿ.ಇ. ನಾರಾಯಣಸ್ವಾಮಿ – ವಿರುದ್ಧ– ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಾರಿಗೆ ನಿಗಮ*** [7] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, ಏಕ–ಪಕ್ಷೀಯ ಆದೇಶವನ್ನು ತೆರವುಗೊಳಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿಯೂ ಕೂಡ ನ್ಯಾಯಾಲಯ ನಿಂದನೆ ವ್ಯವಹರಣೆಗಳನ್ನು ಕೈಗೊಳ್ಳಲಾಗದು ಎಂದು ನಿರ್ಣಯಿಸಿದೆ, ಪ್ರಸ್ತುತ ಮೊಕದ್ದಮೆಯಲ್ಲಿ ಮುಂಚಿನ ಆದೇಶಗಳನ್ನು ಮಾರ್ಪಾಟುಗೊಳಿಸಲಾಗಿದೆ, ಆದ್ದರಿಂದ, ಈ ವ್ಯವಹರಣೆಗಳು ಮುಂದುವರಿಯುವಂತಿಲ್ಲ ಎಂದು ವಾದಿಸಿದ್ದಾರೆ.

10. ಈ ಹಂತದಲ್ಲಿ, ದೂರುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಯು ವಾದಿಸಿ, ಕರ್ನಾಟಕ ಉಚ್ಚ ನ್ಯಾಯಾಲಯ (ನ್ಯಾಯಾಲಯ ನಿಂದನೆ ವ್ಯವಹರಣೆಗಳು) ನಿಯಮಗಳು, 1981 (ಸಂಕ್ಷಿಪ್ತವಾಗಿ 'ನಿಯಮಗಳು')ರ 10ನೇ ನಿಯಮವನ್ನು ಗಮನಿಸಿದರೆ, ಒಮ್ಮೆ ದೋಷಾರೋಪಣೆಯನ್ನು ರೂಪಿಸಿದ ಮೇಲೆ ವ್ಯವಹರಣೆಗಳನ್ನು ಕೈಬಿಡುವ ಪ್ರಶ್ನೆಯೇ ಇಲ್ಲ, ಅಧಿವಿಚಾರಣೆಯು

6. (1992)4 ಎಸ್‌ಸಿಸಿ 167

7. ಸಿಸಿಸಿ (ಸಿವಿಲ್) ಸಂ.81/1993 ದಿನಾಂಕ 1.6.1993

ಮುಂದುವರಿಸಿ, ಅಂತಿಮ ಆದೇಶವನ್ನು ಹೊರಡಿಸಬೇಕಾಗುತ್ತದೆ ಎಂದು ವಾದಿಸಿದ್ದಾರೆ. ಈ ಸಂಬಂದದಲ್ಲಿ ಅವರು ***ಮೈಸೂರು ರಾಜ್ಯ ಸರ್ಕಾರ –ವಿರುದ್ಧ– ಖಲೀಲುಲ್ಲಾ ಅಹಮದ್ ಶರೀಫ್ ಮತ್ತು ಇನ್ನೊಬ್ಬರು*** [7], ಮೊಕದ್ದಮೆಯಲ್ಲಿನ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.

11. ಸದರಿ ವಾದಕ್ಕೆ ಪ್ರತ್ಯುತ್ತರವಾಗಿ ಮಾನ್ಯ ಅಡ್ವೊಕೇಟ್ ಜನರಲ್ ಅವರು, ನ್ಯಾಯಾಂಗ ನಿಂದನೆ ಮೊಕದ್ದಮೆಗಳ ಅಧಿವಿಚಾರಣೆಯಲ್ಲಿ ಸಂಕ್ಷಿಪ್ತ ಅಧಿವಿಚಾರಣೆಗಳಿಗಾಗಿ ನಿಗದಿಪಡಿಸಿದ ಕಾರ್ಯ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ, ಆದ್ದರಿಂದ ದೋಷಾರೋಪವನ್ನು ರೂಪಿಸಿದ ನಂತರ ವ್ಯವಹರಣೆಗಳನ್ನು ಕೈಬಿಡುವುದಕ್ಕೆ ಯಾವ ಪ್ರತಿಷೇಧವೂ ಇಲ್ಲ ಎಂದು ವಾದಿಸಿದರು.

12. ನಾವು ಮಾನ್ಯ ನ್ಯಾಯವಾದಿಗಳ ವಾದಗಳನ್ನು ಎಚ್ಚರಿಕೆಯಿಂದ ಪರಿಗಣಿಸಿದ್ದೇವೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ್ದೇವೆ.

13. ರಿಟ್ ಅರ್ಜಿ ಸಂಖ್ಯೆಗಳಾದ 9654 ರಿಂದ 9666/2013 ಅರ್ಜಿಗಳಲ್ಲಿ ಈ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠವು ದಿನಾಂಕ 1.3.2013ರಂದು ಎದುರುದಾರರಿಗೆ ತುರ್ತು ನೋಟೀಸನ್ನು ನೀಡುವಾಗ, ಅರ್ಜಿದಾರರು/ದೂರುದಾರರನ್ನು ಇನ್ನೂ ವಜಾಗೊಳಿಸಿರದಿದ್ದರೆ, ಅವರ ಸೇವೆಗಳನ್ನು ಅಂತ್ಯಗೊಳಿಸಬಾರದೆಂದು ಅಲ್ಲಿನ ಎದುರುದಾರರಿಗೆ ನಿರ್ದೇಶಿಸಿ ಏಕ ಪಕ್ಷೀಯ ಮಧ್ಯಂತರ ಆದೇಶವನ್ನು ಹೊರಡಿಸಿತು. ಮೊಕದ್ದಮೆಯ ವಿಷಯವನ್ನು ಮತ್ತೊಮ್ಮೆ 25.9.2013ರಂದು ಎತ್ತಿಕೊಳ್ಳಲಾಯಿತು. ಆ ದಿನದಂದು, ನ್ಯಾಯಾಲಯವು, 2ನೇ ಎದುರುದಾರರ ಪರವಾಗಿ ಗಮನ ಹರಿಸುವಂತೆ ಮಾನ್ಯ ಸರ್ಕಾರೀ ವಕೀಲರಿಗೆ ನಿರ್ದೇಶಿಸಿ ದಿನಾಂಕ 1.3.2013ರಂದು ನೀಡಲಾದ ಮಧ್ಯಂತರ ಆದೇಶದ ಮುಂದುವರಿಕೆಯಾಗಿ ಅರ್ಜಿದಾರರು/ದೂರುದಾರರ ವೇತನಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಿತು. ಈ ಆದೇಶವನ್ನು ಪಾಲಿಸಲು ವಿಫಲವಾದ ಕಾರಣಕ್ಕಾಗಿ ದಿನಾಂಕ 12.1.2014ರಂದು

8. ಎಐಆರ್ 1971 ಮೈಸೂರು 60

ಮೇಲ್ಕಂಡ ಮೊಕದ್ದಮೆಗಳನ್ನು ದಾಖಲಿಸಲಾಯಿತು. ದಿನಾಂಕ 17.12.2015ರಂದು ರಿಟ್ ಅರ್ಜಿ ಸಂ.9654ರಿಂದ 9666/2013 ಅರ್ಜಿಗಳಲ್ಲಿ ಮಾನ್ಯ ಏಕ ಸದಸ್ಯ ಪೀಠವು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ನಂತರ ಮೊದಲು ನೀಡಿದ ಮಧ್ಯಂತರ ಆದೇಶಗಳನ್ನು ಮಾರ್ಪಾಟುಗೊಳಿಸಿತು. ದಿನಾಂಕ 17.12.2015ರ ಆದೇಶವನ್ನು ಆಪಾದಿತರು ಪಾಲಿಸಲು ವಿಫಲರಾಗಿದ್ದಾರೆ ಎಂಬುದು ದೂರುದಾರರ ವಾದವಲ್ಲ. ಬದಲಾಗಿ, ದಿನಾಂಕ 25.9.2013ರ ಆದೇಶವನ್ನು ಆಪಾದಿತರು ಪಾಲಿಸಬೇಕಾಗಿತ್ತು ಎಂಬುದು ಅವರ ವಾದವಾಗಿದೆ.

14. ಹಾಗಾಗಿ, ಪರಿಗಣನೆಗೆ ಉದ್ಭವವಾಗುವ ಮೊದಲ ಪ್ರಶ್ನೆಯೇನೆಂದರೆ, ತದನಂತರ ಮಾರ್ಪಾಟಾಗಿರುವ ಮಧ್ಯಂತರ ಆದೇಶಗಳನ್ನು ಪಾಲಿಸದಿರುವುದಕ್ಕೆ ನ್ಯಾಯಾಂಗ ನಿಂದನೆಗೆ ಗುರಿಯಾಗಲು ಆಪಾದಿತ ವ್ಯಕ್ತಿಗಳು ಅರ್ಹರೇ? ಎಂಬುದಾಗಿದೆ.

15. ಮೇಲೆ ಗಮನಿಸಿರುವಂತೆ, ಮೊದಲನೇ ಮಧ್ಯಂತರ ಆದೇಶವು ಏಕ ಪಕ್ಷೀಯ ಆದೇಶವಾಗಿದೆ. ಆದರೆ, ದಿನಾಂಕ 25.9.2013ರಂದು ರಾಜ್ಯ ಸರ್ಕಾರದ ಪರವಾಗಿ ಗಮನಹರಿಸುವಂತೆ ಸರ್ಕಾರೀ ವಕೀಲರಿಗೆ ನಿರ್ದೇಶಿಸಲಾಯಿತು ಮತ್ತು ವೇತನಗಳನ್ನು ಸಂದಾಯ ಮಾಡುವಂತೆ ಆ ರಿಟ್ ಅರ್ಜಿಗಳಲ್ಲಿನ ಎದುರುದಾರರಿಗೆ ನಿರ್ದೇಶಿಸಿ ಮಧ್ಯಂತರ ಆದೇಶವನ್ನು ಮಾಡಲಾಯಿತು. ಈ ಆದೇಶವನ್ನು ಮಾರ್ಪಾಟುಗೊಳಿಸಲಾಗಿದ್ದು, ಮಾರ್ಪಾಟಾದ ಆದೇಶವನ್ನು ಆಪಾದಿತರು ಉಲ್ಲಂಘಿಸಿದ್ದಾರೆ ಎಂಬುದು ದೂರುದಾರರ ವಾದವಾಗಿಲ್ಲ. 'ಮಾರ್ಪಾಟು' ಎಂಬ ಪದದ ಅರ್ಥ 'ಬದಲಾಯಿಸು' ಅಥವಾ 'ವ್ಯತ್ಯಸ್ತಗೊಳಿಸು' ಎಂದಾಗಿರುತ್ತದೆ. ಮಾರ್ಪಾಟಾದ ಆದೇಶವನ್ನು ನ್ಯಾಯಾಲಯವು ಭವಿಷ್ಯವರ್ತಿಯಾಗಿ ಮಾಡಿದ ಹೊರತು ಆ ಮಾರ್ಪಾಟು ವಾಪಸು ಹಿಂದಿನ ಆದೇಶದ ದಿನಾಂಕಕ್ಕೆ ಸಂಬಂಧಿಸುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

16. ಮಾನ್ಯ ಅಡ್ವೊಕೇಟ್ ಜನರಲ್ ಅವರು, ಏಕ–ಪಕ್ಷೀಯ ಮಧ್ಯಂತರ ಆದೇಶದ ಮಾರ್ಪಾಟಿಗಾಗಿ ಅರ್ಜಿ ಸಲ್ಲಿಸಿದಾಗಲೂ ಕೂಡ ಆ ಅರ್ಜಿಯು

ವಿಲೆಯಾಗುವವರೆಗೆ ನ್ಯಾಯಾಲಯ ನಿಂದನೆ ವ್ಯವಹರಣೆಗಳನ್ನು ಕೈಗೊಳ್ಳಲಾಗದು ಎಂದು ಸರಿಯಾಗಿಯೇ ವಾದಿಸಿದ್ದಾರೆ. ***(ಮೇಲೆ ತಿಳಿಸಿದ) ಮೊಹಮ್ಮದ್ ಯಾಕೂಬ್‌ಖಾನ್*** ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು, ತಡೆಯಾಜ್ಞೆ ವಿಷಯವೇ ಅಂತಿಮವಾಗಿ ವಿಲೆಯಾಗದೆ ಏಕ–ಪಕ್ಷೀಯ ಮಧ್ಯಂತರ ಆದೇಶದ ಉಲ್ಲಂಘನೆಗಾಗಿ ಎದುರುದಾರರ ವಿರುದ್ಧ ವ್ಯವಹರಣೆ ಕೈಗೊಳ್ಳುವುದು ನ್ಯಾಯಯುತವಾದುದಲ್ಲವೆಂದು ಹೇಳಿದೆ. ಮಧ್ಯಂತರ ಆದೇಶದ ವಿರುದ್ಧ ಎದುರುದಾರರ ಹೇಳಿಕೆಯನ್ನೇ ಪರಿಗಣಿಸದೆ, ದಂಡನೆಯ ಅಪಾಯವಿರುವ ನ್ಯಾಯಾಂಗ ನಿಂದನೆ ವ್ಯವಹರಣೆಗಳಲ್ಲಿ ಕ್ಲೇಮಿನ ಗುಣಾವಗುಣಗಳನ್ನು ಎದುರಿಸುವಂತೆ ಅವರಿಗೆ ಹೇಳಿದರೆ, ಅದು ಎದುರುದಾರರಿಗೆ ಪ್ರತಿಕೂಲವಾಗುತ್ತದೆ.

17. ***(ಮೇಲೆ ತಿಳಿಸಿದ) ಪಿ.ಇ. ನಾರಾಯಣಸ್ವಾಮಿ*** ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ವಿಭಾಗೀಯ ಪೀಠವು, ರಿಟ್ ಅರ್ಜಿಯಲ್ಲಿ ತಡೆ ವಿಷಯಗಳು ಅಂತಿಮವಾಗಿ ವಿಲೆಯಾಗುವವರೆಗೆ ಏಕ ಪಕ್ಷೀಯ ಆದೇಶದ ಪಾಲನೆಯಾಗಿಲ್ಲ ಎಂಬ ಆಧಾರದ ಮೇಲೆ ನ್ಯಾಯಾಲಯ ನಿಂದನೆ ವ್ಯವಹರಣೆಗಳನ್ನು ಕೈಗೊಳ್ಳಲಾಗದೆಂದು ಮತ್ತು ಆಪಾದಿಸಲಾದ ಏಕ–ಪಕ್ಷೀಯ ಮಧ್ಯಂತರ ಆದೇಶದ ಉಲ್ಲಂಘನೆಯನ್ನು ನ್ಯಾಯಾಲಯವು ಪರಿಗಣಿಸಲು ಮುಂದಾದರೆ ಅಧಿಕಾರ ವ್ಯಾಪ್ತಿಯ ವ್ಯರ್ಥ ಚಲಾವಣೆಯಾಗುತ್ತದೆಂದು ನಿರ್ಣಯಿಸಿದೆ.

18. ಪ್ರಸ್ತುತ ಮೊಕದ್ದಮೆಯಲ್ಲಿ, ನ್ಯಾಯಾಂಗ ನಿಂದನೆ ವ್ಯವಹರಣೆಗಳ ಇತ್ಯರ್ಥದ ಅವಧಿಯಲ್ಲಿ, ಮಾನ್ಯ ಏಕ–ಸದಸ್ಯ ಪೀಠವು ಮಧ್ಯಂತರ ಆದೇಶವನ್ನು ಮಾರ್ಪಾಟುಗೊಳಿಸಿದೆ. ಈ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ, ಆಪಾದಿತರ ವಿರುದ್ಧದ ಈ ದೂರುಗಳ ಬಗ್ಗೆ ವ್ಯವಹರಣೆಯನ್ನು ಕೈಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

19. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರನ್ನು ಹೊರತುಪಡಿಸಿ ರಿಟ್ ಅರ್ಜಿಗಳಲ್ಲಿನ ಎದುರುದಾರರ ವಿರುದ್ಧ ಮೇಲ್ಕಂಡ ದೂರುಗಳನ್ನು ಸಲ್ಲಿಸಲಾಗಿತ್ತು ಎಂಬುದನ್ನು ಗಮನಿಸುವುದು ಇಲ್ಲಿ ಸೂಕ್ತವಾಗುತ್ತದೆ.

ಹಾಗಾಗಿ, ಅವರನ್ನು 12 ಮತ್ತು 13ನೇ ಸಂಖ್ಯೆಯ ಆಪಾದಿತರನ್ನಾಗಿ ಸೇರ್ಪಡೆಗೊಳಿಸಲು ಐ.ಎ.ಸಂಖ್ಯೆ 5/2014 ಮಧ್ಯಂತರ ಅರ್ಜಿಯನ್ನು ಸಲ್ಲಿಸಲಾಗಿತ್ತು. ಪ್ರಾರಂಭದಲ್ಲಿ ದೂರಿಗೆ ಅವರನ್ನು ಪಕ್ಷಕಾರರನ್ನಾಗಿ ಮಾಡದಿರುವುದಕ್ಕೆ ದೂರುದಾರರು ದೂರಿನ 7ನೇ ಪ್ಯಾರಾಗ್ರಾಫ್‌ನಲ್ಲಿ ಮತ್ತು ಅರ್ಜಿಯ ಎರಡನೇ ಪ್ಯಾರಾಗ್ರಾಫ್‌ನಲ್ಲಿಯೂ ಸಹ ಕಾರಣವನ್ನು ನೀಡಿದ್ದಾರೆ. ದಿನಾಂಕ 25.9.2013ರ ಮಧ್ಯಂತರ ಆದೇಶವನ್ನು ನೀಡಿದ ನಂತರ ವೇತನ ಪಾವತಿಗಾಗಿ 'ಝಡ್' ಮತ್ತು 'ಎಎ' ಅನುಬಂಧಗಳಲ್ಲಿರುವ ಮನವಿಗಳನ್ನು ಸಲ್ಲಿಸಲಾಗಿದೆ ಎಂದು ದೂರುದಾರರು ಹೇಳಿದ್ದಾರೆ. ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇವರು ದಿನಾಂಕ 25.9.2013ರ ಮಾನ್ಯ ಏಕ–ಸದಸ್ಯ ಪೀಠದ ಆದೇಶದನುಸಾರ ದೂರುದಾರರಿಗೆ ವೇತನವನ್ನು ಸಂದಾಯ ಮಾಡುವುದಕ್ಕೆ ಕ್ರಮ ಕೈಗೊಳ್ಳುವಂತೆ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ – ಇವರಿಗೆ ನಿರ್ದೇಶಿಸಿದ್ದಾರೆ. ಸದರಿ ಆದೇಶದ ಅನುಸರಣೆಯಾಗಿ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ದಿನಾಂಕ 9.12.2013ರ ಅನುಬಂಧ 'ಬಿಬಿ' ಅನುಸಾರ ದೂರುದಾರರಿಗೆ ವೇತನ ಬಟವಾಡೆ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗೆ ತಿಳಿಸಿದ್ದಾರೆ. ಈ ಆದೇಶ ಹೊರಡಿಸಿದ ನಂತರ, ಮಾನ್ಯ ಏಕ ಸದಸ್ಯ ಪೀಠವು ದಿನಾಂಕ 25.9.2013ರ ಆದೇಶವನ್ನು ಮಾರ್ಪಡಿಸಿದೆ. ಆದ್ದರಿಂದ ಮಾನ್ಯ ಏಕ ಸದಸ್ಯ ಪೀಠದ ದಿನಾಂಕ 25.9.2013ರ ಆದೇಶವನ್ನು ಪಾಲನೆ ಮಾಡಿಲ್ಲ ಎಂದು ಹೇಳಲಾಗದು.

20. ಈಗ ದೂರುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯಾವಾದಿಯು ಅವಲಂಬಿಸಿದ ತೀರ್ಪುಗಳನ್ನು ಪರಿಗಣಿಸೋಣ.

***(ಮೇಲೆ ತಿಳಿಸಿದ) ಪಟೇಲ್ ರಜನೀಕಾಂತ್ ಧುಲಾಬಾಯಿ*** ಮೊಕದ್ದಮೆಯಲ್ಲಿ, ಪ್ರತಿವಾದಿಯು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಪ್ರಕರಣವನ್ನು ಸರ್ವೋಚ್ಚನ್ಯಾಯಾಲಯವು ಪರಿಗಣಿಸುತ್ತಿದ್ದು, ವಾದಿಯು ಹೂಡಿದ ದಾವೆಯು ಅಧಿಕಾರವ್ಯಾಪ್ತಿ ರಹಿತವಾದದ್ದಾಗಿದೆ ಎಂಬುದು ಪ್ರತಿವಾದವಾಗಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಧಿಕಾರವ್ಯಾಪ್ತಿಯ ಪ್ರಶ್ನೆಯು ತೀರ್ಮಾನವಾಗುವವರೆಗೆ

ನಗರ ಸಿವಿಲ್ ನ್ಯಾಯಾಲಯವು ಮಧ್ಯಂತರ ಆದೇಶಗಳನ್ನು ಮಾಡುವ ಅಧಿಕಾರವನ್ನು ಹೊಂದಿದೆ, ನ್ಯಾಯಾಲಯವು ಅವುಗಳನ್ನು ಜಾರಿ ಕೂಡ ಮಾಡಬಹುದು ಎಂದು ನಿರ್ಣಯಿಸಿತ್ತು. ಆ ನಂತರದ ನಿರ್ಣಯವು, ನ್ಯಾಯಾಲಯಕ್ಕೆ ಆ ದಾವೆಯನ್ನು ಪುರಸ್ಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲ ಎಂದು ನಿರ್ಣಯಿಸಿ, ಮೊದಲು ಹೊರಡಿಸಿದ ಮಧ್ಯಂತರ ಆದೇಶಗಳನ್ನು 'ನಾನ್ ಎಸ್ಟ್' ಆಗಿ ಅಥವಾ ಅಧಿಕಾರ ವ್ಯಾಪ್ತಿ ರಹಿತವನ್ನಾಗಿ ಮಾಡಲಿಲ್ಲ. ಅಂಥ ಆದೇಶಗಳನ್ನು ಉಲ್ಲಂಘನೆ ಮಾಡಿದ ಪಕ್ಷಕಾರನು ಹಾಗೆ ಪಾಲಿಸದಿರುವ ಮತ್ತು ಅದನ್ನು ಉಲ್ಲಂಘಿಸಿರುವ ಪರಿಣಾಮಗಳಿಂದ ತಪ್ಪಿಸಿಕೊಳ್ಳಲಾಗದು ಎಂದು ನಿರ್ಣಯಿಸಲಾಗಿತ್ತು.

ಪ್ರಸ್ತುತ ಮೊಕದ್ದಮೆಗಳಲ್ಲಿ, ನ್ಯಾಯಾಲಯವು ನೀಡಿದ ಮಧ್ಯಂತರ ಆದೇಶವನ್ನು ತದನಂತರ ಮಾರ್ಪಾಟುಗೊಳಿಸಲಾಗಿದೆ. ಆದ್ದರಿಂದ, ಈ ತೀರ್ಪು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

21. ***ತಾಯಾಬ್ಬಯ್ ಎಂ. ಬಗಸರ್‌ವಾಲಾ*** (ಮೇಲೆ ಹೇಳಿದ) ಮೊಕದ್ದಮೆಯಲ್ಲೂ ಸಹಾ ***ಪಟೇಲ್ ರಜನೀಕಾಂತ್ ಧುಲಾಬಾಯಿ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿನ ನಿರ್ಣಯದಲ್ಲಿರುವ ಪ್ರಶ್ನೆಯನ್ನೇ ನಿರ್ಧರಿಸಿದೆ.

22. (ಮೇಲೆ ತಿಳಿಸಿದ) ***ರಾಜೇಂದ್ರ ಸಿಂಗ್*** ಮೊಕದ್ದಮೆಯಲ್ಲಿ ಮತ್ತು (ಮೇಲೆ ತಿಳಿಸಿದ) ***ವೇದ್ ಪ್ರಕಾಶ್ ಜೋಶಿ*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಂಗ ನಿಂದನೆ ಅರ್ಜಿ ಬಗ್ಗೆ ವ್ಯವಹರಿಸುವಾಗ ಅಂತಿಮತೆಯನ್ನು ಹೊಂದಿರುವ ಮುಂಚಿನ ನಿರ್ಣಯವನ್ನು ಪಾಲಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು ಮಾತ್ರವೇ ವಾಸ್ತವವಾಗಿ ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯವಾಗಿರುತ್ತದೆ. ಪ್ರಶ್ನಿಸಿಲ್ಲದ ಮುಂಚಿನ ನಿರ್ಣಯದ ಸತ್ಯಾಸತ್ಯತೆಯನ್ನು ಪರಿಶೀಲಿಸುವುದಕ್ಕೆ ಮತ್ತು ಮುಂಚಿನ ನಿರ್ಣಯದಲ್ಲಿ ತಳೆದಿರುವ ನಿಲುವನ್ನು ಹೊರತುಪಡಿಸಿ ಭಿನ್ನಾಭಿಪ್ರಾಯವನ್ನು ತಳೆಯುವುದಕ್ಕೆ ನ್ಯಾಯಾಲಯಕ್ಕೆ ಅವಕಾಶವಿರುವುದಿಲ್ಲ. ಅಂತಿಮತೆಯನ್ನು ದಾಟಿದ ಆದೇಶದ ಸತ್ಯಾಸತ್ಯತೆಯನ್ನು ಅಥವಾ ಇನ್ಯಾವುದನ್ನಾದರೂ ಪರೀಕ್ಷಿಸುವುದಾಗಲಿ ಅಥವಾ ಹೆಚ್ಚುವರಿ ನಿರ್ದೇಶನಗಳನ್ನು ನೀಡುವುದಾಗಲಿ ಅಥವಾ ಅದರಲ್ಲಿ

ಒಳಗೊಂಡಿರುವ ಯಾವುದೇ ನಿರ್ದೇಶನವನ್ನು ತೆಗೆದು ಹಾಕುವುದಾಗಲಿ ಸಾಧ್ಯವಿಲ್ಲ. ಸರಿಯೋ ತಪ್ಪೋ, ಆದೇಶವನ್ನು ಪಾಲಿಸಲೇಬೇಕು ಎಂದು ನಿರ್ಣಯಿಸಿದೆ.

ಪ್ರಸ್ತುತ ಮೊಕದ್ದಮೆಗಳಲ್ಲಿರುವ ಪ್ರಶ್ನೆಯು ಮುಂಚಿನ ಆದೇಶವು ಮಾರ್ಪಾಡಾಗಿರುವ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನೆ ಆಗುತ್ತದೆಯೇ? ಎಂಬುದಾಗಿದೆ. ಆದ್ದರಿಂದ, ಈ ತೀರ್ಪುಗಳು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

23. (ಮೇಲೆ ತಿಳಿಸಿದ) ***ಪೃಥಾವಿನಾಥ್ ರಾಮ್*** ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಂತಿಮತೆಯನ್ನು ಹೊಂದಿರುವ ಪಾಟ್ನಾ ಉಚ್ಚ ನ್ಯಾಯಾಲಯದ ಏಕ–ಸದಸ್ಯಪೀಠದ ದಿನಾಂಕ 30.3.1999ರ ನಿರ್ದೇಶನವನ್ನು ಪಾಲಿಸದಿರುವ ಮೊಕದ್ದಮೆಯೊಂದನ್ನು ಪರಿಗಣಿಸಿತ್ತು. ಸದರಿ ಮೊಕದ್ದಮೆಯಲ್ಲಿ, ಮಾನ್ಯ ಏಕ–ಸದಸ್ಯ ಪೀಠವು ನ್ಯಾಯಾಂಗ ನಿಂದನೆ ವ್ಯವಹರಣೆಗಳನ್ನು ಪ್ರಾರಂಭಿಸುವ ಸಂಬಂಧದ ಅರ್ಜಿಯ ಬಗ್ಗೆ ವ್ಯವಹರಿಸುವಾಗ ನ್ಯಾಯಾಂಗ ನಿಂದನೆಗೆ ಯಾವುದೇ ಕ್ರಮವನ್ನು ಕೈಗೊಳ್ಳುವುದು ಸೂಕ್ತವಾಗುವುದಿಲ್ಲವೆಂದು ನಿರ್ಣಯಿಸಿ ಆದೇಶವನ್ನು ಹೊರಡಿಸಿತ್ತು. ನ್ಯಾಯಾಂಗ ನಿಂದನೆ ವ್ಯವಹರಣೆಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದ ಅರ್ಜಿಯ ಬಗ್ಗೆ ವ್ಯವಹರಿಸುವಾಗ ಪರಿಗಣನೆಯ ವ್ಯಾಪ್ತಿಯು, ಆದೇಶವನ್ನು ಪಾಲಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಗೆ ಮಾತ್ರ ಸೀಮಿತವಾದುದಾಗಿರುತ್ತದೆ ಎಂಬುದನ್ನು ಏಕ–ಸದಸ್ಯ ಪೀಠವು ಗಮನಿಸಿದರೂ ಕೂಡ, ಆದೇಶದ ಸರಿತನವನ್ನು ಪರಿಶೀಲಿಸಲು ಮುಂದಾಗಿ, ದಿನಾಂಕ 30.3.1999ರ ಆದೇಶದಲ್ಲಿರುವಂತಹ ರೀತಿಯ ನಿರ್ದೇಶನವನ್ನು ನೀಡಬಹುದೇ ಎಂಬುದನ್ನು ತನಗೆ ಮನವರಿಕೆ ಮಾಡುವಂತೆ ಪಕ್ಷಕಾರರನ್ನು ಕೋರಿತ್ತು. ಮುಂದೆ, ಏಕ–ಸದಸ್ಯ ಪೀಠವು ಆ ನಿರ್ದೇಶನವನ್ನು ನೀಡಲಾಗದು, ಆದ್ದರಿಂದ ನ್ಯಾಯಾಂಗ ನಿಂದನೆ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲವೆಂಬ ತೀರ್ಮಾನಕ್ಕೆ ಬಂದಿತು. ಈ ಹಿನ್ನೆಲೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಂಗ ನಿಂದನೆ ಅರ್ಜಿ ಬಗ್ಗೆ ವ್ಯವಹರಿಸುವಾಗ ಅಂತಿಮತೆಯನ್ನು ಹೊಂದಿರುವ ಮುಂಚಿನ ನಿರ್ಣಯವನ್ನು ಪಾಲಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು

ಮಾತ್ರವೇ ವಾಸ್ತವವಾಗಿ ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯವಾಗಿರುತ್ತದೆ. ಪ್ರಶ್ನಿಸಿಲ್ಲದ ಮುಂಚಿನ ನಿರ್ಣಯದ ಸತ್ಯಾಸತ್ಯತೆಯನ್ನು ಪರಿಶೀಲಿಸುವುದಕ್ಕೆ ಮತ್ತು ಮುಂಚಿನ ನಿರ್ಣಯದಲ್ಲಿ ತಳೆದಿರುವ ನಿಲುವನ್ನು ಹೊರತುಪಡಿಸಿ ಭಿನ್ನ ಅಭಿಪ್ರಾಯವನ್ನು ತಡೆಯುವುದಕ್ಕೆ ನ್ಯಾಯಾಲಯಕ್ಕೆ ಅವಕಾಶವಿಲ್ಲವೆಂದು ನಿರ್ಣಯಿಸಿದೆ. ಮುಂದುವರಿದು, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

> "ಆದೇಶದಿಂದ ಯಾರೇ ಪಕ್ಷಕಾರನು ಬಾಧಿತನಾದರೆ, ಅವನ ಅಭಿಪ್ರಾಯದಲ್ಲಿ ಅದು ದೋಷಪೂರ್ಣವಾಗಿದೆ ಅಥವಾ ನಿಯಮಗಳಿಗೆ ವಿರುದ್ಧವಾಗಿದೆ ಅಥವಾ ಅದರ ಜಾರಿಯು ಕಾರ್ಯ ಸಾಧ್ಯವಾದುದಾಗಲಿ ಅಥವಾ ಸರಳವಾದುದಾಗಲಿ ಅಲ್ಲ ಎಂದು ಭಾವಿಸಿದರೆ, ಆತನು ಯಾವಾಗಲೂ ಆದೇಶವನ್ನು ಹೊರಡಿಸಿದ ನ್ಯಾಯಾಲಯದ ಮುಂದೆ ಹೋಗಬೇಕಾಗುತ್ತದೆ ಅಥವಾ ಮೇಲ್ಮನವಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಬಳಸಿಕೊಳ್ಳಬೇಕಾಗುತ್ತದೆ. ಆದೇಶದ ಸರಿತನ ಅಥವಾ ದೋಷಪೂರ್ಣತೆಯನ್ನು ನ್ಯಾಯಾಂಗ ನಿಂದನೆ ವ್ಯವಹರಣೆಗಳಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ. ತಪ್ಪೋ ಅಥವಾ ಸರಿಯೋ ಆದೇಶವನ್ನು ಪಾಲಿಸಲೇಬೇಕಾಗುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ ಅಂತಿಮವಾಗಿ ಮಧ್ಯಂತರ ಆದೇಶವನ್ನು ತೆರವುಗೊಳಿಸಿದರೂ ಕೂಡ ಅಥವಾ ಪ್ರಧಾನ ವ್ಯವಹರಣೆಯಲ್ಲಿ ಪಕ್ಷಕಾರನಿಗೆ ಪರಿಹಾರವನ್ನು ನೀಡದಿದ್ದರೂ ಕೂಡ ಎದುರು ಪಕ್ಷಕಾರನು ನ್ಯಾಯಾಲಯವು ಹೊರಡಿಸಿದ ಯಾವುದೇ ಮಧ್ಯಂತರ ಆದೇಶವನ್ನು ಪಾಲಿಸದಿರುವುದಕ್ಕೆ ಅದನ್ನು ಆಧಾರವಾಗಿ ತೆಗೆದುಕೊಳ್ಳಬಾರದು ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ . . . . ."
>
> (ಮುಖ್ಯವಾದುದ್ದಕ್ಕೆ ಒತ್ತು ನೀಡಿದ್ದೇವೆ)

24. ನ್ಯಾಯಾಲಯವು ಮುಂದುವರಿದು, ಪ್ರಸ್ತುತ ಮೊಕದ್ದಮೆಯಲ್ಲಿ ಅಂತಿಮವಾಗಿ ಮಧ್ಯಂತರ ಆದೇಶವನ್ನು ತೆರವುಗೊಳಿಸಿದರೂ ಕೂಡ ಅಥವಾ ಪ್ರಧಾನ

ವ್ಯವಹರಣೆಯಲ್ಲಿ ಪಕ್ಷಕಾರನಿಗೆ ಪರಿಹಾರವನ್ನು ನೀಡದಿದ್ದರೂ ಕೂಡ ನ್ಯಾಯಾಲಯವು ಹೊರಡಿಸಿದ ಯಾವುದೇ ಮಧ್ಯಂತರ ಆದೇಶವನ್ನು ಪಾಲಿಸದಿರುವುದಕ್ಕೆ ಎದುರು ಪಕ್ಷಕಾರನು ಅದನ್ನು ಆಧಾರವಾಗಿ ತೆಗೆದುಕೊಳ್ಳಲಾಗದು ಎಂದು ನಿರ್ಣಯಿಸಿದೆ.

25. ಪ್ರಸ್ತುತ ಮೊಕದ್ದಮೆಯಲ್ಲಿ, ಎದುರುದಾರರು/ಆಪಾದಿತರು ಏಕ–ಸದಸ್ಯ ಪೀಠದ ಮೊರೆ ಹೋಗಿದ್ದು, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ನಂತರ, ಮುಂಚಿನ ಮಧ್ಯಂತರ ಆದೇಶವನ್ನು ಮಾರ್ಪಾಟುಗೊಳಿಸಲಾಗಿದೆ. ಆದ್ದರಿಂದ, ಆಪಾದಿತರು ಈ ನ್ಯಾಯಾಲಯದ ನಿಂದನೆಯನ್ನು ಮಾಡಿದ್ದಾರೆಂದು ಹೇಳಲಾಗದು.

26. ಪರಿಗಣನೆಗೆ ಇರುವ ಎರಡನೆಯ ಪ್ರಶ್ನೆಯೆಂದರೆ, ದೋಷಾರೋಪಗಳನ್ನು ರೂಪಿಸಿದ ನಂತರ ನ್ಯಾಯಾಂಗ ವ್ಯವಹರಣೆಗಳನ್ನು ಕೈಬಿಡಬಹುದೇ?

27. ನಿಯಮಗಳ ಪೈಕಿ 10ನೇ ನಿಯಮವು ಮೊಕದ್ದಮೆಗಳ ವಿಚಾರಣೆ ಮತ್ತು ಅಧಿವಿಚಾರಣೆಯ ಬಗ್ಗೆ ಉಪಬಂಧ ಕಲ್ಪಿಸುತ್ತದೆ. 10ನೇ ನಿಯಮದ (ii)ನೇ ಉಪ–ನಿಯಮವು ಆಪಾದಿತನು ಸಲ್ಲಿಸಿದ ಪ್ರತ್ಯುತ್ತರವನ್ನು ಪರಿಗಣಿಸಿದ ನಂತರ ಮತ್ತು ಪಕ್ಷಕಾರರ ಅಹವಾಲುಗಳನ್ನು ಆಲಿಸಿದ ನಂತರ ನ್ಯಾಯಾಲಯವು ವ್ಯವಹರಣೆಗಳನ್ನು ಕೈಬಿಡಬಹುದು ಮತ್ತು ಆಪಾದಿತನನ್ನು ಬಿಡುಗಡೆಗೊಳಿಸಬಹುದೆಂದು ಹೇಳುತ್ತದೆ. 10ನೇ ನಿಯಮದ (iii)ನೇ ಉಪ ನಿಯಮವು, ನ್ಯಾಯಾಲಯವು ಅಹವಾಲುಗಳನ್ನು ಆಲಿಸಿದ ನಂತರ ಅದು ಮೇಲ್ನೋಟಕ್ಕೆ ಸಾಬೀತಾಗುವ ಮೊಕದ್ದಮೆಯೆಂದು ಮನದಟ್ಟಾದರೆ, ಅದು ದೋಷಾರೋಪಣೆಯನ್ನು ರೂಪಿಸಲು ಮುಂದಾಗತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಆಪಾದಿತನಿಗೆ ನೀಡತಕ್ಕದ್ದೆಂದು ಹೇಳುತ್ತದೆ. 10ನೇ ನಿಯಮದ (iv)ನೇ ಉಪ ನಿಯಮವು, ಆಪಾದಿತನಿಗೆ ದೋಷಾರೋಪವನ್ನು ಓದಿ ವಿವರಿಸತಕ್ಕದ್ದು ಮತ್ತು ನ್ಯಾಯಾಲಯವು ಆತನ ಹೇಳಿಕೆಯೇನಾದರೂ ಇದ್ದರೆ ಅದನ್ನು ದಾಖಲಿಸತಕ್ಕದ್ದು ಎಂದು ತಿಳಿಸುತ್ತದೆ. 10ನೇ ನಿಯಮದ (v)ನೇ ಉಪ–ನಿಯಮವು, ಆಪಾದಿತನು ತಪ್ಪೊಪ್ಪಿಕೊಂಡರೆ ನ್ಯಾಯಾಲಯವು ಆತನ ತಪ್ಪಿನ ಬಗ್ಗೆ ಅಧಿವಿಚಾರಣೆ ನಡೆಸಿ

ಸೂಕ್ತವೆಂದು ಭಾವಿಸಬಹುದಾದಂಥ ಶಿಕ್ಷೆಯ ಆದೇಶವನ್ನು ನೀಡಲು ಮುಂದಾಗಬಹುದೆಂದು ಹೇಳುತ್ತದೆ. ಮುಂದಿನ ಸೂಕ್ತ ನಿಯಮವೆಂದರೆ, ಅದು 10(vi)ನೇ ನಿಯಮ, ಅದು, ಆಪಾದಿತನು ತಪ್ಪನ್ನು ಒಪ್ಪಿಕೊಳ್ಳದಿದ್ದರೆ, ಅದೇ ದಿನ ಮೊಕದ್ದಮೆಯನ್ನು ಅಧಿವಿಚಾರಣೆಗೆ ತೆಗೆದುಕೊಳ್ಳಬಹುದು ಅಥವಾ ನ್ಯಾಯಾಲಯವು ಸೂಚಿಸಿದಂಥ ಮುಂದಿನ ಯಾವುದೇ ದಿನಾಂಕಕ್ಕೆ ನಿಗದಿಪಡಿಸಬಹುದು ಎಂದು ಹೇಳುತ್ತದೆ.

28. 13ನೇ ನಿಯಮವು ಅಧಿವಿಚಾರಣೆಯ ಕಾರ್ಯವಿಧಾನದ ಬಗ್ಗೆ ಉಪಬಂಧ ಕಲ್ಪಿಸುತ್ತದೆ. ಅಧಿನಿಯಮ ಮತ್ತು ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ದಂಡ ಪ್ರಕ್ರಿಯಾ ಸಂಹಿತೆ (ಸಂಕ್ಷಿಪ್ತವಾಗಿ 'ಸಂಹಿತೆ')ಯ ಅಧ್ಯಾಯ–XXIರ ಅಡಿಯಲ್ಲಿ ಸಂಕ್ಷಿಪ್ತ ಅಧಿವಿಚಾರಣೆಗಳಿಗಾಗಿ ನಿಯಮಿಸಿದ ಕಾರ್ಯ ವಿಧಾನಗಳನ್ನೇ ಸಾಧ್ಯವಾದಷ್ಟು ಮಟ್ಟಿಗೆ ನ್ಯಾಯಾಂಗ ನಿಂದನೆ ಮೊಕದ್ದಮೆಗಳ ಅಧಿವಿಚಾರಣೆಗಳಲ್ಲಿಯೂ ಅನುಸರಿಸತಕ್ಕದ್ದೆಂದು ಅದು ಹೇಳುತ್ತದೆ.

29. ಸಂಹಿತೆಯ XXIನೇ ಅಧ್ಯಾಯವು ಸಂಕ್ಷಿಪ್ತ ಅಧಿವಿಚಾರಣೆಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳ ಬಗ್ಗೆ ಉಪಬಂದಿಸುತ್ತದೆ. 262ನೇ ಪ್ರಕರಣವು, ಸದರಿ ಅಧ್ಯಾಯದ ಅಡಿಯಲ್ಲಿನ ಅಧಿವಿಚಾರಣೆಗಳಲ್ಲಿ, ಆ ನಂತರದ ಪ್ರಕರಣಗಳಲ್ಲಿ ತಿಳಿಸಿದ ಪ್ರಕ್ರಿಯೆಯನ್ನು ಹೊರತುಪಡಿಸಿ, ಸಮನುಗಳ ಮೊಕದ್ದಮೆಯ ಅಧಿವಿಚಾರಣೆಗಳಿಗಾಗಿ ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು. ಸಂಹಿತೆಯ ಅಧ್ಯಾಯ – XXI ಸಮನುಗಳ ಮೊಕದ್ದಮೆಗಳಿಗಾಗಿ ನಿಗದಿಪಡಿಸಿದ ಕಾರ್ಯಪ್ರಕ್ರಿಯೆಯ ಬಗ್ಗೆ ಉಪಬಂಧ ಕಲ್ಪಿಸುತ್ತದೆ. ಸಂಹಿತೆಯ 258ನೇ ಪ್ರಕರಣವು, ದೂರಿನ ಮೇಲೆ ಹೊರತಾಗಿ ಹೂಡಲಾದ ಯಾವುದೇ ಸಮನುಗಳ ಮೊಕದ್ದಮೆಯಲ್ಲಿ ಪ್ರಥಮದರ್ಜೆ ಮ್ಯಾಜಿಸ್ಟ್ರೇಟರು ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರ ಪೂರ್ವಾನುಮತಿಯೊಂದಿಗೆ ಯಾರೇ ಇತರ ಮ್ಯಾಜಿಸ್ಟ್ರೇಟರು, ಅವರು ದಾಖಲಿಸುವ ಕಾರಣಗಳಿಗಾಗಿ, ಯಾವುದೇ ತೀರ್ಪನ್ನು ಘೋಷಿಸದೆ ಯಾವುದೇ ಹಂತದಲ್ಲಿ ಆ ವ್ಯವಹರಣೆಗಳನ್ನು ಸ್ಥಗಿತಗೊಳಿಸಬಹುದು ಮತ್ತು ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ದಾಖಲಿಸಿಕೊಂಡ ನಂತರ ವ್ಯವಹರಣೆಗಳನ್ನು

ಹಾಗೆ ಸ್ಥಗಿತಗೊಳಿಸಿದ ಸಂದರ್ಭದಲ್ಲಿ ಖುಲಾಸೆ ತೀರ್ಪನ್ನು ಘೋಷಿಸಬಹುದು ಮತ್ತು ಇತರ ಯಾವುದೇ ಸಂದರ್ಭದಲ್ಲಿ ಆಪಾದಿತನನ್ನು ಬಿಡುಗಡೆಗೊಳಿಸಬಹುದು ಮತ್ತು ಅಂಥ ಬಿಡುಗಡೆಯು ವಿಮುಕ್ತಿಯ ಪರಿಣಾಮವನ್ನು ಹೊಂದಿರತಕ್ಕದ್ದು ಎಂದು ಉಪಬಂಧಿಸುತ್ತದೆ.

30. ನ್ಯಾಯಾಂಗ ನಿಂದನೆ ಮೊಕದ್ದಮೆಗಳ ಅಧಿವಿಚಾರಣೆಗಾಗಿ ನಿಗದಿಪಡಿಸಿದ ಕಾರ್ಯ ಪ್ರಕ್ರಿಯೆಯು ಸಂಕ್ಷಿಪ್ತ ಕಾರ್ಯಪ್ರಕ್ರಿಯೆಯಾಗಿದೆ. ಆದ್ದರಿಂದ, ದೋಷಾರೋಪವನ್ನು ರೂಪಿಸಿದ ನಂತರವೂ ಕೂಡ ಮುಂದಿನ ವ್ಯವಹರಣೆಗಳನ್ನು ಸ್ಥಗಿತಗೊಳಿಸುವುದಕ್ಕೆ ಪ್ರತಿಷೇಧವಿಲ್ಲ. (ಮೇಲೆ ತಿಳಿಸಿದ) ***ಖಲೀಲುಲ್ಲಾ ಅಹಮದ್ ಶರೀಫ್*** ಮೊಕದ್ದಮೆಯಲ್ಲಿ ದೂರುದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಯು ಅವಲಂಬಿಸಿದ ತೀರ್ಪು ವಾರಂಟು ಮೊಕದ್ದಮೆಗೆ ಸಂಬಂಧಿಸಿದ್ದಾಗಿದೆ. ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಈ ತೀರ್ಪು ಅನ್ವಯವಾಗುವುದಿಲ್ಲ.

31. ಆದೇಶದ ಮಾರ್ಪಾಟಿನ ನಂತರ ದೂರುದಾರರು ವೇತನಗಳಿಗೆ ಹಕ್ಕುಳ್ಳವರೇ ಇಲ್ಲವೇ ಎಂಬುದನ್ನು ರಿಟ್ ಅರ್ಜಿಗಳಲ್ಲಿ ನಿರ್ಧರಿಸಬೇಕಾಗುತ್ತದೆ. ದೂರುದಾರರಿಗೆ ಎಲ್ಲಾ ವಾದಗಳನ್ನು ಮಂಡಿಸುವ ಸ್ವಾತಂತ್ರ್ಯವನ್ನು ಕಾಯ್ದಿರಿಸಿ, ಈ ವ್ಯವಹರಣೆಗಳನ್ನು ಕೈಬಿಡಲಾಗಿದೆ ಮತ್ತು ಆಪಾದಿತರನ್ನು ವಿಮುಕ್ತಗೊಳಿಸಲಾಗಿದೆ.

32. ಮೇಲ್ಕಂಡ ಹಿನ್ನೆಲೆಯಲ್ಲಿ, ಐ.ಎ.ಸಂ.5/2014 ಅರ್ಜಿಯು ಪರಿಗಣನೆಗೆ ಉಳಿಯುವುದಿಲ್ಲ. ತದನುಸಾರವಾಗಿ ಅದನ್ನು ವಿಲೆ ಮಾಡಲಾಗಿದೆ. ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲ.

---